ಒ.ಎಸ್.113/2015

ಪಿ.ಡಬ್ಲ್ಯೂ1 ದಿಃ 16-07-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಸಿ.ಎಸ್.ಡಿ ಪ್ರತಿವಾದಿ ಪರ ವಕೀಲರಿಂದ

ದಾವಾಸ್ತಿ ಹಾಗೂ ಪ್ರತಿವಾದಿಯ ಆಸ್ತಿ ಸಾಬ್ಜಾನ್ ಸಾಬ್ ರವರಿಗೆ ಸೇರಿರುತ್ತದೆ ಎಂದರೆ ಸರಿ. ತದನಂತರ ಸದರಿ ಆಸ್ತಿಗಳು ಅವರ ಮಕ್ಕಳಿಗೆ ಹಿಸ್ಸೆ ಮೂಲಕ ಭಾಗವಾಗಿರುತ್ತದೆ. ಸದರಿ ಆಸ್ತಿಗಳು ದೊಡ್ಡ ವಿಸ್ತೀರ್ಣದ ಆಸ್ತಿಯಾಗಿದ್ದು ಪೇಟೆ ಬೀದಿಗೆ ಹೊಂದಿಕೊಂಡಿದ್ದ ಆಸ್ತಿಗಳಾಗಿದ್ದವು ಎಂದರೆ ಸರಿ. ಸದರಿ ಆಸ್ತಿಗಳು ಹಿಸ್ಸೆಯಾಗುವ ಮೊದಲು ಆರ್.ಸಿ.ಸಿ., ಕಟ್ಟಡ ಹಾಗೂ ಹಂಚಿನ ಮಳಿಗೆ ಮತ್ತು ಶೆಡ್ ಗಳಾಗಿದ್ದವು ಎಂದರೆ ಸರಿ. 1 ನೇ ಪ್ರತಿವಾದಿಯು ಖರೀದಿ ಮಾಡಿರುವ ಆಸ್ತಿಯು ಹಂಚಿನ ಕಟ್ಟಡವಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ಸದರಿ ಖರೀದಿ ಮಾಡಿದ ಜಾಗದಲ್ಲಿದ್ದ ಹಂಚಿನ ಕಟ್ಟಡವನ್ನು ತೆರವುಗೊಳಿಸಿ ಪಿಲ್ಲರ್ ಗಳ ಆಧಾರದ ಮೇಲೆ ಆರ್.ಸಿ.ಸಿ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಸ್ವತ್ತಿನ ದಕ್ಷಿಣ ದಿಕ್ಕಿಗೆ ನನ್ನ ಸ್ವತ್ತು ಇದೆ ಎಂದರೆ ಸಾಕ್ಷಿಯು ಪಶ್ಚಿಮ ದಿಕ್ಕಿಗೆ ಇದೆ ಎಂದು ನುಡಿದಿರುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಯು ಸಹ ಹಂಚಿನ ಕಟ್ಟಡವಾಗಿತ್ತು ಎಂದರೆ ಸರಿಯಲ್ಲ, ಸಾಕ್ಷಿಯು ನಾನು ಖರೀದಿ ಮಾಡಿದ ಸಮಯದಲ್ಲಿ ಆರ್.ಸಿ.ಸಿ. ಕಟ್ಟಡವಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿರುವ ಸ್ವತ್ತು ಇಂಗ್ಲೀಷಿನ ಎಲ್ ಆಕಾರವಾಗಿದ್ದು ಅದರ ಪಶ್ಚಿಮ ದಿಕ್ಕಿನಿಗೆ ತ್ರಿಕೋನ ಆಕಾರದ ಖಾಲಿ ಜಾಗ ಇರುತ್ತದೆ. ಸದರಿ ತ್ರಿಕೋನಾಕಾರಾದ ಖಾಲಿ ಜಾಗದಿಂದ 1 ನೇ ಪ್ರತಿವಾದಿ ಕಡೆಗೆ ಇರುವ ಗೋಡೆ ಈ ದಾವೆಯ ವಿವಾದದ ಸಂಗತಿಯಾಗಿರುತ್ತದೆ. ಸದರಿ ಗೋಡೆಯು ಮೇಲೆ ಹೇಳಿದ ಸಾಬ್ಜಾನ್ ಸಾಬ್ ರವರ ಕಾಲದಿಂದಲೂ ಸಹ ಅಸ್ತಿತ್ವದಲ್ಲಿದೆ ಎಂದರೆ ಸರಿ. ಸದರಿ ಗೋಡೆಯು ನನ್ನ ಆಸ್ತಿಗಳು ಹಾಗೂ ಪ್ರತಿವಾದಿಗಳ ಆಸ್ತಿಯನ್ನು ವಿಭಾಗ ಮಾಡುವಂತಹ ಗೋಡೆಯಾಗಿರುತ್ತದೆ ಎಂದರೆ ಸರಿ. ಸದರಿ ಗೋಡೆಯು 9 ಇಂಚಿನ ಗೋಡೆ ಇದೆ ಎಂದರೆ ಸರಿ. ಸದರಿ ಗೋಡೆಯ ಮೇಲೆ ನನ್ನ ಸ್ವತ್ತಿನ ಭಾರ ಹಾಗೂ 1 ನೇ ಪ್ರತಿವಾದಿಯ ಸ್ವತ್ತಿನ ಭಾರವೂ ಸಹ ಬಿದ್ದಿರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು ಈಗ ನಿರ್ಮಿಸಿರುವ ಕಟ್ಟಡವನ್ನು

ಕಟ್ಟುವಾಗ ಸದರಿ ಗೋಡೆಯ ಪಕ್ಕ ತನ್ನ ಸ್ವತ್ತಿನ ಒಳಗೆ ಮತ್ತೊಂದು 9 ಇಂಚಿನ ಗೋಡೆಯನ್ನು ಸಹ ನಿರ್ಮಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿವಾದಾಂಶಿತವಾದ ಗೋಡೆಯು ಮೂಲತಃ 12 ಅಡಿ ಎತ್ತರವಿದ್ದು ಈಗ 18 ಅಡಿ ಎತ್ತರವಿದೆ ಎಂದರೆ ಸರಿ. 1 ನೇ ಪ್ರತಿವಾದಿಯು ತಾನು ನಿರ್ಮಿಸಿದ ಗೋಡೆಯ ಜೊತೆ ವಿವಾದಾಂಶದ 4.5 ಇಂಚು ಜಾಗವನ್ನು ಬಳಸಿಕೊಂಡು ಒಟ್ಟು 15 ಅಡಿ ಎತ್ತರದ ಗೋಡೆಯನ್ನು ನಿರ್ಮಿಸಿರುತ್ತಾರೆ. ಆದರೆ ನನ್ನ ಕಡೆ ಬರುವ 4.5 ಇಂಚು ಗೋಡೆಯನ್ನು ಖಾಲಿ ಬಿಡಲಾಗಿರುತ್ತದೆ ಎಂದರೆ ಸರಿ. ಸದರಿ ಗೋಡೆಯನ್ನು 1 ನೇ ಪ್ರತಿವಾದಿಯು ನನ್ನ ಆಸ್ತಿ ಮತ್ತು ಪ್ರತಿವಾದಿಗಳ ಆಸ್ತಿಯನ್ನು ವಿಭಾಗ ಮಾಡುವ ಸಲುವಾಗಿ ರಕ್ಷಣೆ ಮಾಡುವ ಗೋಡೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಕಟ್ಟಿರುವ 4.5 ಇಂಚಿನ ಗೋಡೆಯು ಮೂಲ ಗೋಡೆಯ ಮೇಲೆ ಯಾವುದೇ ರೀತಿಯಾದ ಭಾರ ಬೀಳಿವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನಿರ್ಮಿಸಿರುವ ಗೋಡೆಯು ಕೇವಲ ಆಸ್ತಿಗಳನ್ನು ಭಾಗ ಮಾಡುವ ಉದ್ದೇಶಕ್ಕಾಗಿ ನಿರ್ಮಿಸಿದ್ದು ಮತ್ತು ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ತಂದಿರುರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿವಾದಿತ ಗೋಡೆಯನ್ನು ನ್ಯಾಯಾಲಯದ ಆಯುಕ್ತರು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಿರುತ್ತಾರೆ ಮತ್ತು ನಮ್ಮ ಆಸ್ತಿಗಳನ್ನು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ವರದಿಯು ಸರಿಯಿರುವುದಿಲ್ಲ ಹಾಗೂ ಸದರಿ ವರದಿಯಲ್ಲಿ ಈಗ ನಿರ್ಮಿಸಿರುವ ಗೋಡೆಯ ಬಗ್ಗೆ ಯಾವುದೇ ಉಲ್ಲೇಖವನ್ನು ನೀಡಿರುವುದಿಲ್ಲ ಹಾಗೂ ಹೊಸದಾಗಿ ನಿರ್ಮಿಸಿರುವ ಗೋಡೆಯನ್ನು ಸಹ ಮೂಲ ಗೋಡೆ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯು ನಿಜಾಂಶಗಳನ್ನು ಬಿಂಬಿಸುತ್ತಿದ್ದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಸ.ಇ.ಎ.ಒ

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು

ಜೆ.ಎಂ.ಎಫ್.ಸಿ